ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/12/2014-15. ದಿನಾಂಕ:12-07-2016.

<table>
<tr><th>ವಾದಿಗಳು</th><th>ಪ್ರತಿವಾದಿಗಳು</th></tr>
<tr><td>ಮಂಜುನಾಥ ತಂದೆ ಲೇಟ್ ಸಿ.ಗಂಗಪ್ಪ<br>ಜೋಳದಕೂಡ್ಲಿಗಿ ಗ್ರಾಮ<br>ಕೂಡ್ಲಿಗಿ ತಾಲೂಕು</td><td>1)ತುಕರಾಮ್ ತಂದೆ ಸಿ.ಗಂಗಪ್ಪ<br>2)ಭೀಮೇಶ ತಂದೆ ಸಿ.ಗಂಗಪ್ಪ<br>ಜೋಳದಕೂಡ್ಲಿಗಿ ಗ್ರಾಮ<br>ಕೂಡ್ಲಿಗಿ ತಾಲೂಕು</td></tr>
<tr><td colspan="2">ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 799ಎ/2. ವಿಸ್ತೀರ್ಣ 2-00. ಎಕ್ರೆ ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.</td></tr>
</table>

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 799ಎ/2. ವಿಸ್ತೀರ್ಣ 2-00. ಎಕ್ರೆ ಜಮೀನನ್ನು ಸದರಿ ಗ್ರಾಮದ ಸಿ.ಮಂಜುನಾಥ ತಂದೆ ಲೇಟ್ ಸಿ.ಗಂಗಪ್ಪ ಇವರು ದಿನಾಂಕ 24-03-2014 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಜೋಳದಕೂಡ್ಲಿಗಿ ಇವರು ನಮೂನೆ-21 ನೋಟಿಸನ್ನು ದಿನಾಂಕ 14-05-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ತುಕರಾಮ್ ತಂದೆ ಸಿ.ಗಂಗಪ್ಪ. ಭೀಮೇಶ ತಂದೆ ಸಿ. ಗಂಗಪ್ಪ. ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 48/2013-14. ದಿನಾಂಕ 15-06-2014 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 08-07-2014 ರಿಂದ 12-07-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಜೋಳದಕೂಡ್ಲಿಗಿ ಗ್ರಾಮದ ಸನಂ 799ಎ/2. ವಿಸ್ತೀರ್ಣ 2-00. ಎಕ್ರೆ ಜಮೀನನ್ನು ನನ್ನ ತಂದೆಯವರಾದ ಚಿನ್ನೇನಹಳ್ಳಿ ಗಂಗಪ್ಪ ತಂದೆ ಚನ್ನಬಸಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇದ್ದು ಇವರು ದಿನಾಂಕ 10-08-1997 ರಂದು ಹಾಗೂ ನನ್ನ ತಾಯಿಯವರಾದ ಚನ್ನಮ್ಮ ಇವರು ದಿನಾಂಕ 29-10-1985 ರಂದು ನಿಧನ ಹೊಂದಿದ್ದು ನಾವುಗಳು ಸದರಿ ಜಮೀನನ್ನು ದಿನಾಂಕ 24-03-2014 ರಂದು ಪಾಲು ವಿಭಾಗದ ಪತ್ರ ಬರೆಯಿಸಿದ್ದು ಸದರಿ ಪಾಲು ವಿಭಾಗದ ಪತ್ರದಂತೆ ನನ್ನ ಹಿಸ್ಸ್ಯಾಕ್ಕೆ ಬಂದಿರುವ ಕಾರಣ ಪೋತಿವಾರಸು ಹಾಗೂ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನಲ್ಲಿ ನಮಗೆ ಭಾಗ ಇರುವುದರಿಂದ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ತಕರಾರುದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರಿಗೆ ನೋಟಿಸ್ಸು ಜಾರಿ ಮಾಡಲಾಗಿ ಅವರು ಹಾಜರಾಗಿ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ ಇದರಿಂದ ಅವರಿಗೆ ಈ ಬಗ್ಗೆ ಆಸಕ್ತಿ ಇಲ್ಲವೆಂದು ಕಂಡು ಬಂದ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 799ಎ/2. ವಿಸ್ತೀರ್ಣ 2-00. ಎಕ್ರೆ ಜಮೀನಿನ ಅರ್ಜಿದಾರರು ವಿಚಾರಣೆಗೆ ಗೈರು ಹಾಜರಾಗಿರುವ ಕಾರಣ ಅವರಿಗೆ ಈ ಬಗ್ಗೆ ಆಸಕ್ತಿ ಇಲ್ಲವೆಂದು ಕಂಡು ಬಂದ ಕಾರಣ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 12-07-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ, ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಮಂಜುನಾಥ ತಂದೆ ಲೇಟ್ ಸಿ.ಗಂಗಪ್ಪ ಜೋಳದಕೂಡ್ಲಿಗಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ತುಕರಾಮ್ ತಂದೆ ಸಿ.ಗಂಗಪ್ಪ. ಭೀಮೇಶ ತಂದೆ ಸಿ.ಗಂಗಪ್ಪ ಜೋಳದಕೂಡ್ಲಿಗಿ ಗ್ರಾಮ ಕೂಡ್ಲಿಗಿ ತಾಲೂಕು ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.